1 ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು** 401**-**2024

**ಸಿ.ಡಬ್ಲ್ಯು -**6, **ಪಿ.ಡಬ್ಲ್ಯು -**2

**ಸಾಕ್ಷಿದಾರರ ಹೆಸರು** : ಡಾ. ಉಮಾ ದೇವಿ
ಗಂಡನ **ಹೆಸರು** : ಡಾ. ಹನುಮಂತಪ್ಪ
**ವಯಸ್ಸು** : 59 ವರ್ಷ
**ಉದ್ಯೋಗ** : ಡೆಪ್ಯೂಟಿ ಡೈರೆಕ್ಟರ್, ಪಾಲಿ ಕ್ಲೀನಿಕ್, ಯಲ್ಲಾಪುರ
**ವಾಸ** : ಯಲ್ಲಾಪುರ

**ಪ್ರಮಾಣೀಕರಿಸಿದ ದಿನಾಂಕ:**14.07.2026**.**

**ಮುಖ್ಯ ವಿಚಾರಣೆ :** ಸ.ಸ.ಅ. ರವರಿಂದ

1. ನಾನು 2022 ರಿಂದ 2025 ರವರೆಗೆ ಸಾಗರದಲ್ಲಿ ಮುಖ್ಯ ಆಡಳಿತ ಪಶು ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ28.06.2023 ರಂದು ಪೊಲೀಸರು ನನಗೆ ಮಾಂಸವನ್ನು ಜಪ್ತು ಮಾಡಿದ್ದೇವೆ, ಅದು ಯಾವುದರ ಮಾಂಸವೆಂದು ಪರೀಕ್ಷೆ ಮಾಡಿ ಹೇಳಿ ಎಂದು ನಿವೇದಿಸಿಕೊಂಡರು. ಆಗ ನನ್ನನ್ನು ಕೌತಿ ಬಸ್ ನಿಲ್ದಾಣಕ್ಕೆ ಕರೆದುಕೊಂಡು ಹೋದರು. ಪೊಲೀಸರು ಮಾಂಸವನ್ನು ಜಪ್ತುಪಡಿಸಿಕೊಂಡಿದ್ದರು. ಅದರಲ್ಲಿ ನಾನು ಪರೀಕ್ಷೆಗೆಂದು ಅರ್ಧ ಕೆ.ಜಿ.ಯಷ್ಟು ಪ್ಲಾಸ್ಟಿಕ್ ಡಬ್ಬಿಯಲ್ಲಿ ತೆಗೆದುಕೊಂಡು ಕಚೇರಿಗೆ ಬಂದು ಅದನ್ನು ಪರೀಕ್ಷೆಗೆಂದು ರಾಸಾಯನಿಕ ಪ್ರಯೋಗಾಲಯ, ದಾವಣಗೆರೆಗೆ ಕಳುಹಿಸಿದೆ. ಪರೀಕ್ಷೆಗೆ ಕಳುಹಿಸಿದ ನಂತರ ಉಳಿದ ಮಾದರಿಯನ್ನು ಪೊಲೀಸರಿಗೆ ಹಸ್ತಾಂತರಿಸಿದೆ.

3. ಸಾಕ್ಷಿಯು ನಿಪಿ 1 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಛಾಯಾಚಿತ್ರದಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಛಾಯಾಚಿತ್ರವನ್ನು ನಿಪಿ 3 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎಂ.ಎ.ಬಿ. ವಕೀಲರಿಂದ

1. ದಿಃ28.06.2023 ರಂದು ನಾನು ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಆ ದಿನ ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ಪೊಲೀಸರು ನನಗೆ ನಿವೇದನೆಯನ್ನು ಸಂಜೆ 5.30 ಕ್ಕೆ ನಮ್ಮ ಮನೆಯ ಬಳಿ ಬಂದು ನೀಡಿದರು. ಸದರಿ ನಿವೇದನಾ ಪತ್ರ ನ್ಯಾಯಾಲಯದ ಮುಂದೆ ಇರುವುದಿಲ್ಲ.

ಆ ದಿನ ನಾನು ಸಂಜೆ 5 ಗಂಟೆಗೆ ಕೆಲಸ ಮುಗಿಸಿ ಮನೆಗೆ ಹೋಗಿರುತ್ತೇನೆ. ಕೌತಿಯ ಬಳಿ ಹೋದಾಗ ಸಮಯ ಸಂಜೆ 6 ಗಂಟೆಯಾಗಿತ್ತು. ನಾನು ಮನೆಯಿಂದ ಪೊಲೀಸರ ವಾಹನದಲ್ಲಿ ಕೌತಿಗೆ ಹೋಗಿರುತ್ತೇನೆ.

2. ಮಾಂಸದ ಮಾದರಿಯನ್ನು ಪ್ಲಾಸ್ಟಿಕ್ ಬಾಟಲಿಯಲ್ಲಿ ತೆಗೆದುಕೊಂಡೆ, ಅದನ್ನು ಅದೇ ದಿನ ಸೀಲ್ ಮಾಡಲಿಲ್ಲ. ಸೀಲ್ ಮಾಡದೇ ಬಾಟಲಿಯನ್ನು ಶಿತಲೀಕರಣ ಯಂತ್ರದಲ್ಲಿ ಇಟ್ಟಿದ್ದೆ. ಒಂದು ವಾರದವರೆಗೂ ನಾನು ಸದರಿ ಮಾದರಿ ಮಾಂಸವನ್ನು ಶಿತಲೀಕರಣ ಯಂತ್ರದಲ್ಲಿ ಇಟ್ಟಿದ್ದೆ. ದಾವಣಗೆರೆಗೆ ಮಾಂಸದ ಮಾದರಿಯನ್ನು ಪೊಲೀಸರು ಕಳುಹಿಸಿರುತ್ತಾರೆ. ನಿಪಿ 1 ರ ಮೇಲಿರುವ ನನ್ನ ಸಹಿಯನ್ನು ನಾನು ದಿ:29.06.2023 ರಂದು ನಮ್ಮ ಕಚೇರಿಯಲ್ಲಿ ಮಾಡಿದೆ. ನಿಪಿ 3 ನ್ನು ಸ್ಥಳದಲ್ಲಿ ತೆಗೆಯಲಾಗಿರುತ್ತದೆ. ನಾನು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**

**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.